ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1011
ಸದಸ್ಯರ ಹೆಸರು : ಶ್ರೀ ಆರ್.ಧರ್ಮಸೇನ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 12.03.2020.
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿನ ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯಗಳೇನು; ಅಧಿಕಾರಿಗಳು ಯಾವ ವಿಷಯದಲ್ಲಿ ಕಾರ್ಯನಿರ್ವಹಣೆ ಮಾಡುತ್ತಾರೆ;	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಸರ್ಕಾರ ಜನತೆಯ ಶ್ರೇಯೋಭಿವೃದ್ಧಿಗಾಗಿ ರೂಪಿಸುವ ಅಭಿವೃದ್ಧಿ ಕಾರ್ಯಗಳಿಗೆ ವಿವಿಧ ಪ್ರಚಾರ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡಲಾಗುತ್ತಿದೆ. ಜೊತೆಗೆ ಆಯಾ ಜಿಲ್ಲೆಯಲ್ಲಿ ನಡೆಯುವ ಪ್ರಮುಖ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ, ಪ್ರಗತಿ ಪರಿಶೀಲನೆ, ಮುಂತಾದ ಕಾರ್ಯಗಳಿಗೆ ಪತ್ರಕರ್ತರ ಪ್ರವಾಸ, ಪತ್ರಿಕಾಗೋಷ್ಠಿ ಕ್ಷೇತ್ರಪ್ರಚಾರ ಏರ್ಪಡಿಸುವ ಕೆಲಸವನ್ನು ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ.
(ಆ)	ಸಾರ್ವಜನಿಕ ಸಂಪರ್ಕ ಇಲಾಖೆ ಸಾರ್ವಜನಿಕರಿಗೆ ಯಾವ ರೀತಿ ಸ್ಪಂದಿಸುತ್ತದೆ; ಜನರಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ;	ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ನಿರ್ವಹಿಸುತ್ತಾ ಸ್ಪಂದಿಸುತ್ತಿದ್ದು, ಸರ್ಕಾರವು ರೂಪಿಸುವ ಪ್ರಮುಖ ಯೋಜನೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಬೀದಿ ನಾಟಕ, ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸುವುದು, ಜಿಲ್ಲೆಗಳಲ್ಲಿ ನಡೆಯುವ ಜಾತ್ರೆ ಉತ್ಸವಗಳಲ್ಲಿ ವಸ್ತುಪ್ರದರ್ಶನ, ಸರ್ಕಾರದ ಯೋಜನೆಗಳ ಕುರಿತು ಸಂವಾದ ಏರ್ಪಡಿಸುವುದು, ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಜಾಹೀರಾತು ಪ್ರಕಟಿಸುವುದು, ಹೆದ್ದಾರಿ ಫಲಕಗಳಲ್ಲಿ ಪ್ರಚಾರ, ಕರಪತ್ರಗಳ ಹಂಚಿಕೆ, ಸರ್ಕಾರದ ಮಾಹಿತಿ/ಯೋಜನೆಗಳ ಪ್ರಗತಿ ಬಿಂಬಿಸುವ ಕಿರುಹೊತ್ತಿಗೆ ಮುದ್ರಿಸಿ ವಿತರಿಸುವುದು. ಸರ್ಕಾರದ ಪ್ರಮುಖ ಕಾರ್ಯಕ್ರಮಗಳ ಮಾಹಿತಿಯನ್ನು ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳಲ್ಲಿ ಸಿದ್ಧಪಡಿಸಿ ಜಿಲ್ಲಾ ಕೇಂದ್ರಗಳಲ್ಲಿ ಅಳವಡಿಸುವ ಮೂಲಕ ಸಾರ್ವಜನಿಕರಿಗೆ ಯೋಜನೆಗಳ ಮಾಹಿತಿಗಳನ್ನು ಒದಗಿಸಲಾಗುತ್ತಿದೆ. ಎಲ್.ಇ.ಡಿ. ವಾಲ್ ವಾಹನಗಳ ಮೂಲಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಪ್ರಚಾರ ಕೈಗೊಂಡು ಮಾಹಿತಿಯನ್ನು ನೀಡಲಾಗಿದೆ. ದೃಶ್ಯ ಶ್ರವ್ಯ ಮಾಧ್ಯಮವಾದ "ಕಲಾಜಾಥಾ" ಕಾರ್ಯಕ್ರಮದ ಮೂಲಕ ಎಲ್ಲಾ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ಯೋಜನೆಗಳ ಬಗ್ಗೆ ಪ್ರಸಾರ ಕೈಗೊಳ್ಳಲಾಗಿದೆ.

2...

(ಇ)	ಕಳೆದ ಎರಡು ವರ್ಷಗಳ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವಿವರವನ್ನು ನೀಡುವುದು?	ಕಳೆದ ಎರಡು ವರ್ಷಗಳ ಕಾರ್ಯಚಟುವಟಿಕೆಗ ಸಂಕ್ಷಿಪ್ತ ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

KCI-PIP/52/2020-INFO-KC-SEC

ಬಿ.ಎಸ್.ಯಡಿಯೂರಪ್ಪ
(ಮುಖ್ಯಮಂತ್ರಿ)

ಅನುಬಂಧ

ಕಳೆದ 2 ವರ್ಷಗಳ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವಿವರ

ಕ್ಷೇತ್ರ ಪ್ರಚಾರ ಕಾರ್ಯಕ್ರಮಗಳು :-

- **ಜನಮನ** :- ಸರ್ಕಾರ ರೂಪಿಸಿ ಜಾರಿಗೊಳಿಸಿರುವ ಯೋಜನೆಗಳ ಫಲಾನುಭವಿಗಳ ಜೊತೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಎಲ್ಲಾ ಸಚಿವರು "ಸಂವಾದ" ನಡೆಸುವ ವಿಶೇಷ ಜನಮನ ಕಾರ್ಯಕ್ರಮವನ್ನು ಮೈಸೂರು ಹಾಗೂ ಬೆಂಗಳೂರಿನಲ್ಲಿ ಕಳೆದ ಎರಡು ವರ್ಷಗಳಲ್ಲಿ ಏರ್ಪಡಿಸಲಾಯಿತು.
- ನವದೆಹಲಿಯ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ರಾಜ್ಯದ ಪರವಾಗಿ ಇಲಾಖೆಯು ನಿರಂತರವಾಗಿ ಐದು ವರ್ಷಗಳಿಂದ ಸ್ತಬ್ಧಚಿತ್ರ ನಿರ್ಮಿಸಿ ಭಾಗವಹಿಸುತ್ತಾ ಬಂದಿರುತ್ತದೆ.
- ಡಾ|| ಬಿ.ಆರ್. ಅಂಬೇಡ್ಕರ್ ಅವರ ಜೀವನ, ಬದುಕು, ಅವರ ಕೊಡುಗೆ ಬಿಂಬಿಸುವ ಭಾರತ ಭಾಗ್ಯವಿದಾತ "ಧ್ವನಿ ಬೆಳಕು" ಕಾರ್ಯಕ್ರಮವನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಏರ್ಪಡಿಸಲಾಯಿತು.
- ಪ್ರಥಮ ಪ್ರಧಾನಿ ಹಾಗೂ ಆಧುನಿಕ ಭಾರತದ ಶಿಲ್ಪಿ ಪಂಡಿತ್ ಜವಹಾರಲಾಲ್ ನೆಹರೂ ಅವರ ಜೀವನ, ಬದುಕು, ಅವರ ಕೊಡುಗೆ ಕುರಿತ ಅಪೂರ್ವ ಛಾಯಾಚಿತ್ರ ಪ್ರದರ್ಶನವನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಏರ್ಪಡಿಸಲಾಯಿತು.
- ಹಿಂದುಳಿದ ವರ್ಗಗಳ ಸ್ರೇತಾರ ಹಾಗೂ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಅವರ ಜೀವನ, ಬದುಕು, ಅವರ ಕೊಡುಗೆ ಕುರಿತ ಅಪೂರ್ವ ಛಾಯಾಚಿತ್ರ ಪ್ರದರ್ಶನವನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಏರ್ಪಡಿಸಲಾಯಿತು.

ಪತ್ರಕರ್ತರ ಕಲ್ಯಾಣ ಕಾರ್ಯಕ್ರಮಗಳು :-

- ಪ್ರಸಕ್ತ ಸರ್ಕಾರವು ಪತ್ರಕರ್ತರಿಗೆ ನೀಡುವ ಮಾಸಾಶನವನ್ನು ಮೂರು ಹಂತಗಳಲ್ಲಿ ರೂ.4,000/- ಗಳಿಂದ ರೂ.10,000/- ಗಳಿಗೆ ಹೆಚ್ಚಿಸಲಾಗಿದೆ.
- ಮೃತ ಪತ್ರಕರ್ತರ ಕುಟುಂಬ ಮಾಸಾಶನವನ್ನು ರೂ.1,000/- ರಿಂದ ರೂ.3,000/- ಗಳಿಗೆ ಹೆಚ್ಚಿಸಲಾಗಿದೆ.
- ರಾಜೀವ್ ಆರೋಗ್ಯ ವಿಮಾ ಯೋಜನೆಯನ್ನು ಪತ್ರಕರ್ತರಿಗೂ ವಿಸ್ತರಿಸಿದ್ದು, ಪತ್ರಕರ್ತರ ಪಾಲಿನ ವಿಮಾ ಶುಲ್ಕವನ್ನು ಇಲಾಖೆ ಭರಿಸುತ್ತಿದೆ.
- ಮಾನ್ಯತೆ ಪಡೆದ ಪತ್ರಕರ್ತರಿಗೆ ನೀಡುತ್ತಿದ್ದ "ಸ್ಮಾರ್ಟ್ ಕಾರ್ಡ್" ಅನ್ನು ರಾಜ್ಯಾದ್ಯಂತ ಬಳಸಲು ಅವಕಾಶ ಕಲ್ಪಿಸಲಾಗಿದೆ.
- ಮಾನ್ಯತೆ ಪಡೆಯದ ಪತ್ರಕರ್ತರಿಗೆ ಸ್ಥಳೀಯವಾಗಿ ಓಡಾಡಲು ಉಚಿತ "ಬಸ್ ಪಾಸ್" ಸೌಲಭ್ಯವನ್ನು ಒದಗಿಸಿದೆ.

ಚಲನಚಿತ್ರರಂಗದ ಬೆಳವಣಿಗೆಗೆ ತೆಗೆದುಕೊಂಡ ಕ್ರಮಗಳು :-

- ಸಹಾಯಧನಕ್ಕಾಗಿ ಆಯ್ಕೆಯಾಗುವ ಗುಣಾತ್ಮಕ ಚಲನಚಿತ್ರಗಳ ಸಂಖ್ಯೆಯನ್ನು 75 ರಿಂದ ಹಂತ ಹಂತವಾಗಿ 125 ಚಲನಚಿತ್ರಗಳಿಗೆ ಹೆಚ್ಚಿಸಲಾಗಿದೆ.
- ಡಾ|| ರಾಜ್‌ಕುಮಾರ್ ಜನ್ಮ ದಿನಾಚರಣೆಯಂದೇ "ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ" ನಿಗದಿಪಡಿಸಲಾಗಿದೆ.
- ಕನ್ನಡ ಚಲನಚಿತ್ರಗಳಿಗೆ ಚಿತ್ರಮಂದಿರ ಒದಗಿಸುವ ಸಲುವಾಗಿ ಕನ್ನಡ ಚಲನಚಿತ್ರಗಳನ್ನು ಪ್ರದರ್ಶಿಸುವ "ಜನತಾ ಮಂದಿರ"ಗಳ ನಿರ್ಮಾಣಕ್ಕಾಗಿ ರೂ.50.00 ಲಕ್ಷದವರೆಗೆ ಸಹಾಯಧನವನ್ನು ನೀಡುವ ಯೋಜನೆ ಜಾರಿಗೊಳಿಸಲಾಗಿದೆ.
- ಹಳೆಯ ಹಾಗೂ ಪ್ರಶಸ್ತಿ ವಿಜೇತ ಅವಿಸ್ಮರಣೀಯ ಚಿತ್ರಗಳಿಂದ ಆಯ್ದ ಗೀತೆಗಳ "ಗಾನಯಾನ" ಕಾರ್ಯಕ್ರಮವನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮೂರು ವರ್ಷಗಳಿಂದ ಆಯೋಜಿಸಲಾಗುತ್ತಿದೆ.

2....

- ಚಲನಚಿತ್ರರಂಗದ ಕಾರ್ಮಿಕರು, ತಂತ್ರಜ್ಞರ ಆರೋಗ್ಯ ಸೌಲಭ್ಯ ಒದಗಿಸಲು "ಚಲನಚಿತ್ರ ಕಾರ್ಮಿಕರ ದತ್ತಿನಿಧಿ" ಸ್ಥಾಪಿಸಿ ರೂ.10.00 ಕೋಟಿಗಳ ಅನುದಾನ ಒದಗಿಸಿದೆ.
- ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಒಂದೇ ಕಡೆ ನಡೆಸುವ ಬದಲು ಏಕಕಾಲದಲ್ಲಿ ಬೆಂಗಳೂರು ಹಾಗೂ ಮೈಸೂರಿನಲ್ಲಿ ಏರ್ಪಡಿಸಲಾಗುತ್ತಿದೆ.

ಮಹಾತ್ಮ ಗಾಂಧಿ ಸಂಬಂಧಿತ ಕಾರ್ಯಕ್ರಮಗಳು :-

- ಮಹಾತ್ಮ ಗಾಂಧಿಜೀಯವರ 150ನೇ ಜನ್ಮವರ್ಷಾಚರಣೆಯ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಆಚರಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯನ್ನು "ಸಮನ್ವಯ ಇಲಾಖೆಯ"ಯನ್ನಾಗಿ ಘೋಷಿಸಲಾಗಿದೆ.
- ಮಹಾತ್ಮ ಗಾಂಧೀಜಿಯವರ ಸಂದೇಶವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಸಮುದಾಯದ ಬೆಳವಣಿಗೆಯಲ್ಲಿ ತೊಡಗಿಕೊಂಡಿರುವ ಗಾಂಧಿ ಚಿಂತಕರಿಗೆ ಪ್ರತಿ ವರ್ಷ ರೂ.5.00 ಲಕ್ಷಗಳ ನಗದನ್ನು ಒಳಗೊಂಡ "ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ-ಕರ್ನಾಟಕ" ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.

ಇದುವರೆಗೆ ಪ್ರಶಸ್ತಿ ಪಡೆದವರು :-

1) ಶ್ರೀ ಎಸ್.ಎನ್. ಸುಬ್ಬರಾವ್,
2) ಡಾ|| ಹೋ. ಶ್ರೀನಿವಾಸಯ್ಯ,
3) ಶ್ರೀಮತಿ ಚನ್ನಮ್ಮ ಹಳ್ಳಿಕೇರಿ,
4) ಶ್ರೀ ಎಚ್.ಎಸ್. ದೊರೆಸ್ವಾಮಿ.
5) ಶ್ರೀ ಪ್ರಸನ್ನ ಹೆಗ್ಗೋಡು
6) ಪ್ರೊ|| ಜಿ.ಎಸ್. ಜಯದೇವ

- ಪ್ರತಿ ಜಿಲ್ಲೆಯಲ್ಲಿ ರೂ.3.00 ಕೋಟಿ ವೆಚ್ಚದಲ್ಲಿ ಗಾಂಧಿ ಭವನ ನಿರ್ಮಾಣ ಯೋಜನೆಯನ್ನು ಘೋಷಿಸಲಾಗಿದ್ದು, ಇದುವರೆಗೆ 24 ಜಿಲ್ಲೆಗಳಲ್ಲಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.
- "ಮಹಾತ್ಮ ಗಾಂಧೀಜಿಯವರು ಕಂಡ ಕನಸು ಕರ್ನಾಟಕದಲ್ಲಿ ನನಸು" ವಿಶೇಷ ಅಭಿಯಾನವನ್ನು 30 ಜಿಲ್ಲೆಗಳಲ್ಲಿ ಏರ್ಪಡಿಸಲಾಗಿದೆ.

ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಲು ಹಮ್ಮಿಕೊಂಡ ಕಾರ್ಯಕ್ರಮಗಳು :-

- ಸರ್ಕಾರದ ಪ್ರಮುಖ ಯೋಜನೆಗಳ ಮಾಹಿತಿಯನ್ನು ಸಿದ್ಧಪಡಿಸಿ ಡಿಜಿಟಲ್ ಎಲ್.ಇ.ಡಿ. ಯಲ್ಲಿ ಅಳವಡಿಸಿ 10 ಸ್ಥಳಗಳಲ್ಲಿ ಸ್ಥಾಪಿಸಿ, ಪ್ರಚಾರ ಕೈಗೊಳ್ಳಲಾಗಿದೆ.
- ಎಲ್.ಇ.ಡಿ. ವಾಲ್ ವಾಹನಗಳ ಮೂಲಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ಕಾರ್ಯಕ್ರಮಗಳ ಪ್ರಚಾರ ಕೈಗೊಳ್ಳಲಾಗಿದೆ.
- ದೃಶ್ಯ ಶ್ರವ್ಯ ಮಾಧ್ಯಮವಾದ "ಕಲಾಜಾಥಾ" ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಏರ್ಪಡಿಸಲಾಗಿದೆ.
- ಮಾನ್ಯ ಮುಖ್ಯಮಂತ್ರಿಗಳ ಕಾರ್ಯಕ್ರಮಗಳನ್ನು ಜನತೆಗೆ ನೇರವಾಗಿ ತಲುಪಿಸಲು ಮಾಹಿತಿ ತಂತ್ರಜ್ಞಾನದ ಸಾಮಾಜಿಕ ಜಾಲತಾಣವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಸ್ಥಾಪಿಸಿ, ಇದನ್ನು ಬಳಸಲು ಅನುಕೂಲವಾಗುವಂತೆ ನುರಿತ ತಂಡವನ್ನು ನಿಯೋಜಿಸಲಾಗಿದೆ.